ಸರ್ಕಾರಿ ಪ್ರೌಢ ಶಾಲೆಗಳಲ್ಲಿ 274 ಕನ್ನಡ ಉಪಾಧ್ಯಾಯರ ಹುದ್ದೆಗಳು ಖಾಲಿ ಇವೆ. (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)

ಅ) 2001-2002ನೇ ಸಾಲಿನಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಈಗಾಗಲೇ ನೇಮಕಾತಿ ಪ್ರಕ್ರಿಯೆ ಪ್ರಕಟಿಸಲಾಗಿದೆ. ಏತನ್ಮಧ್ಯೆ ಹೆಚ್ಚುವರಿ ಶಿಕ್ಷಕರನ್ನು ಅಗತ್ಯ ಶಾಲೆಗಳಿಗೆ ಸ್ಥಳಾಂತರಿಸುವ ಮೂಲಕ ತೊಂದರೆಯಾಗದಂತೆ ಕ್ರಮ ವಹಿಸಲಾಗಿದೆ.

ಇ) 2001-2002ನೇ ಸಾಲಿನಲ್ಲಿಯೇ ತುಂಬಲಾಗುವುದು.

ಕೋಲಾರ ಜಿಲ್ಲೆಯಲ್ಲಿ ಮಂಜೂರಾದ ನೇತಾಜಿ ಸುಭಾಷ್‌ಚಂದ್ರಬೋಸ್ ಶಾಲೆಯ ಕಟ್ಟಡದ ನಿರ್ಮಾಣ

2618(2919) ಕೆ. ಶ್ರೀನಿವಾಸಗೌಡ ಕುದುವನಹಳ್ಳಿ (ಕೋಲಾರ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೋಲಾರ ಜಿಲ್ಲೆಯಲ್ಲಿ ಮಂಜೂರಾದ ನೇತಾಜಿ ಸುಭಾಷ್‌ಚಂದ್ರಬೋಸ್ ಪ್ರೌಢ ಶಾಲಾ ಕಟ್ಟಡಗಳ ಸಂಖ್ಯೆ ಎಷ್ಟು;

ಆ) ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ;

ಇ) ಎಷ್ಟು ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ;

ಈ) ಬಿಡುಗಡೆಯಗಿರುವ ಅನುದಾನವೆಷ್ಟು, ಖರ್ಚಾಗಿರುವ ಮೊತ್ತವೆಷ್ಟು;

ಉ) ಅಪೂರ್ಣಗೊಂಡಿರುವ ಕಾಮಗಾರಿಯನ್ನು ಪೂರ್ಣಗೊಳಿಸಲು ಎಷ್ಟು ಅನುದಾನ ಬೇಕಾಗುತ್ತದೆ; ಹಣ ಬಿಡುಗಡೆ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಹೆಚ್. ವಿಶ್ವನಾಥ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) 12

ಆ) 1

ಇ) 11

ಈ) ಬಿಡುಗಡೆಯಗಿರುವ ಮೊತ್ತ ರೂ.108.00 ಲಕ್ಷಗಳು
ಖರ್ಚಾದ ಮೊತ್ತ ರೂ.85,943 ಲಕ್ಷಗಳು

ಉ) ಸದರಿ ಯೋಜನೆಯಡಿ ಒಂದು ಪ್ರೌಢಶಾಲಾ ಕಟ್ಟಡಕ್ಕೆ ರೂ.9.00 ಲಕ್ಷದಂತೆ ಒಟ್ಟು 12 ಪ್ರೌಢಶಾಲೆಗೆ ರೂ.108.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಕೊರತೆ ಬರುವ ಮೊತ್ತವನ್ನು ಸಂಬಂಧಿಸಿದ ಜಿಲ್ಲಾ ಪಂಚಾಯತ್‌ಗಳೇ ಭರಿಸಬೇಕೆಂದು ಸೂಚಿಸಲಾಗಿದೆ.

ಬೀದರ್ ಜಿಲ್ಲೆ ಹುಮ್ನಾಬಾದ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಮಹಿಳಾ ವೈದ್ಯಾಧಿಕಾರಿ ಕೊರತೆ

2619(2949) ಶ್ರೀ ಸುಭಾಶ್ ಕಲ್ಲೂರ್ (ಹುಮ್ನಾಬಾದ್) :— ನ್ನಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೀದರ್ ಜಿಲ್ಲೆ ಹುಮ್ನಾಬಾದ್ ಸಾರ್ವಜನಿಕ ಆಸ್ಪತ್ರೆಯನ್ನು ಪ್ರಾರಂಭ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಇದ್ದಲ್ಲಿ, ಜರ್ಮನ್ ಅನುದಾನದಿಂದ ಎಷ್ಟು ಕೋಟಿ ಮೊತ್ತದಲ್ಲಿ ಈ ಆಸ್ಪತ್ರೆಯನ್ನು ನಿರ್ಮಿಸಲಾಗಿದೆ?

ಇ) ಈ ಆಸ್ಪತ್ರೆ ಎಷ್ಟು ಹಾಸಿಗೆಗಳುಳ್ಳ ಸಾಮರ್ಥ್ಯ ಹೊಂದಿದೆ; ಇದಕ್ಕೆ ಅನುಗುಣವಾಗಿ ವೈದ್ಯರಿದ್ದಾರೆಯೇ: (ವೈದ್ಯರ ಸಂಖ್ಯೆಯ ವಿವರ ನೀಡುವುದು)

ಈ) ಯಾವ ಯಾವ ವಿಷಯಗಳಲ್ಲಿ (ವಿಶೇಷ ತಜ್ಞರು) ಪರಿಣತಿ ಹೊಂದಿದ ವೈದ್ಯರಿದ್ದಾರೆ; ಇದರಲ್ಲಿ ಎಂ.ಡಿ ಮತ್ತು ಎಂ.ಎಸ್. ಮಾಡಿರುವವರ ಸಂಖ್ಯೆ ಎಷ್ಟು?

ಉ) ಈ ಆಸ್ಪತ್ರೆಯಲ್ಲಿ ಸ್ತ್ರೀರೋಗ ತಜ್ಞ, ಮಹಿಳಾ ವೈದ್ಯರು ಇದ್ದಾರೆಯೇ; ಇಲ್ಲದಿದ್ದಲ್ಲಿ, ಮಹಿಳಾ ವೈದ್ಯರ ನೇಮಕಕ್ಕೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಇದೆ

ಆ) ಹುಮ್ನಾಬಾದ್ ಸಾರ್ವಜನಿಕ ಆಸ್ಪತ್ರೆಯನ್ನು 30 ಹಾಸಿಗೆಗಳಿಂದ 50 ಹಾಸಿಗೆಗಳಿಗೆ ವಿಸ್ತರಿಸಿ ನವೀಕರಿಸಿ ಅಭಿವೃದ್ಧಿಗೊಳಿಸುವ ಕಾಮಗಾರಿ ಜರ್ಮನಿ ನೆರವಿನ ಕೆಎಫ್‌ಡಬ್ಲ್ಯೂ ಯೋಜನೆ ಮೊದಲನೇ ಹಂತದಲ್ಲಿ ಸೇರಿದ್ದು, ರಾಷ್ಟ್ರೀಯ ಸ್ಪರ್ಧಾತ್ಮಕ ಗುತ್ತಿಗೆ ಕರೆದು ರೂ.135.66 ಲಕ್ಷಗಳಿಗೆ ಗುತ್ತಿಗೆ ನೀಡಲಾಗಿದೆ ಹಾಗೂ ದಿನಾಂಕ 18.3.2000 ರಂದು ಒಪ್ಪಂದ ಮಾಡಿಕೊಳ್ಳಲಾಗಿದೆ. ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿರುವ ಕಾಲಾವಧಿ 18 ತಿಂಗಳುಗಳು. ಕರಾರಿನಂತೆ ದಿನಾಂಕ: 17.9.2001 ರಂದು ಕಾಮಗಾರಿ ಪೂರ್ಣಗೊಳ್ಳಬೇಕಾಗುತ್ತದೆ.